# ದೇಶ ಮತ್ತು ಧರ್ಮ

ರಾಮಾಯಣ ಮಹಾಕಾವ್ಯದ ಅಂತ್ಯದಲ್ಲಿ ಶ್ರೀರಾಮಚಂದ್ರನು ವಿಭೀಷಣನನ್ನು ರಾಜನನ್ನಾಗಿ ಪಟ್ಟಾಭಿಷೇಕ ಮಾಡುತ್ತಾನೆ. ಆ ಸಂದರ್ಭದಲ್ಲಿ ಅತ್ಯಂತ ಸಂಪದ್ಭರಿತವಾಗಿರುವ ಲಂಕೆಯಲ್ಲೇ ಶ್ರೀರಾಮನು ಸೀತಾಲಕ್ಷ್ಮಣರೊಡನೆ ಇರಬೇಕೆಂಬ ಮಾತು ಪ್ರಸ್ತಾಪಕ್ಕೆ ಬರುತ್ತದೆ. ಆಗ ಶ್ರೀರಾಮನು ತಾಯಿ ಮತ್ತು ತಾಯ್ನೆಲ ನಮಗೆ ಪವಿತ್ರವಾದವು. ಅವು ಹೇಗಿದ್ದರೂ ಅವೇ ನಮಗೆ ಪ್ರೀತಿಪಾತ್ರವಾದಂಥವು. ನಮ್ಮ ಗಮ್ಯ ಮತ್ತು ಗುರಿ ಅವೇ ಆಗಿರಬೇಕು. ಅಲ್ಲೇ ನಮ್ಮ ಜನ್ಮಕ್ಕೆ ಅರ್ಥ ಪ್ರಾಪ್ತಿಯಾಗುವಂಥದ್ದು ಎಂಬ ಮಾತುಗಳನ್ನಾಡಿ ಲಂಕೆಯಲ್ಲಿರಲು ನಿರಾಕರಿಸಿ ಸೀತಾಲಕ್ಷ್ಮಣರೊಡನೆ ಅಯೋಧ್ಯೆಗೆ ಮರಳುತ್ತಾನೆ.

ಈ ಪ್ರಸಂಗ ನಮ್ಮ ತಾಯ್ನೆಲವೆಂಬುದು ಸರ್ವ ಸಂಗತಿಗಳಿಗಿಂತಲೂ ಶ್ರೇಷ್ಠವಾದುದು. ಅಲ್ಲೇ ನಮ್ಮ ಬಾಳಿನ ಅರ್ಥವಿದೆ; ಅದರ ಮೇಲಿನ ಪ್ರೀತಿಯು ಮಾತೃಸದೃಶವಾದುದಾಗಿದೆ. ಅದರ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ನಾವು ದುಡಿಯಬೇಕಾಗಿದೆ ಎಂಬ ಸತ್ಯವನ್ನು ಬಹಿರಂಗಪಡಿಸುತ್ತದೆ. ನಾವು ಜಗತ್ತಿನ ಯಾವುದೇ ಮೂಲೆಯಲ್ಲಿದ್ದರೂ ನಮ್ಮ ಅಂತಿಮ ಗಮ್ಯ ನಮ್ಮ ತಾಯ್ನೆಲವೇ ಆಗಿರಬೇಕೆಂಬ ಚಿರ ತತ್ವವನ್ನು ರಾಮಾಯಣ ನಮ್ಮ ಅರಿವಿಗೆ ಮೂಡಿಸುತ್ತದೆ. ರಾಮಾಯಣದ ಈ ತತ್ವವೇ ಶತಶತಮಾನಗಳಿಂದ ನಿಶ್ಶಬ್ದವಾಗಿ ನಮ್ಮ ಸಾಹಿತ್ಯದಲ್ಲಿ ಹರಿದು ಬರುತ್ತಿದೆ. ಅದು ಪರಂಪರೆಯನ್ನು ಮುಂದುವರಿಸುವ ಶುಷ್ಕ ಮಾರ್ಗವಾಗಿರದೆ, ಬದುಕಿನ ಚಿರ ಮೌಲ್ಯಗಳಲ್ಲಿ ಪ್ರಮುಖವಾಗಿರುವುದರಿಂದ ಅದು ವರ್ತಮಾನಕ್ಕೆ ಬೇಕಾಗಿರುವ ಅಗತ್ಯ ದಾರಿದೀಪವಾಗಿದೆ. ಗ್ರಾಮೀಣ ಬದುಕನ್ನು ನಿರಾಕರಿಸುತ್ತಾ, ನಾಗರೀಕತೆಯ ಕೃತಕ ಆಡಂಬರಕ್ಕೆ, ತಾತ್ಕಾಲಿಕ ಆಕರ್ಷಣೆಗೆ ಒಳಗಾಗುತ್ತಿರುವ ತರುಣ ಜನಾಂಗಕ್ಕೆ ಅಗತ್ಯವಾಗಿ ಬರಬೇಕಾದ ತಿಳಿವಳಿಕೆಯಿದು. ಈ ರಾಮಾಯಣದ ಚಿರ ಮೌಲ್ಯವನ್ನೇ ಬೇರೆ ಬೇರೆ ಸ್ವರೂಪಗಳಲ್ಲಿ ನಮ್ಮ ಕುವೆಂಪು, ಕಾರಂತರು ನಿರೂಪಿಸಿದ್ದಾರೆ. ಕಾರಂತರ ಮರಳಿ ಮಣ್ಣಿಗೆ ಮತ್ತು ಚಿಗುರಿದ ಕನಸು ಕಾದಂಬರಿಗಳು, ಕುವೆಂಪು ಅವರ ಕಾನೂರು ಹೆಗ್ಗಡತಿ ಕೃತಿ ಈ ತತ್ವವನ್ನು ಸಮರ್ಪಕವಾಗಿ ಮಂಡಿಸುತ್ತವೆ. ಬಂಗಾರದ ಮನುಷ್ಯ ನಂಥ ಚಲನಚಿತ್ರವಂತೂ ಈ ತತ್ವವನ್ನು ಪರಿಣಾಮಕಾರಿಯಾಗಿ ಪ್ರತಿಫಲಿಸುತ್ತದೆ.

ದೇಶಕ್ಕೆ ಒಂದು ಸೀಮೆ ಇರುತ್ತದೆ. ಆ ಸೀಮೆಗೆ ವಿಶಿಷ್ಟವಾದ ಭಾಷೆ, ಆಹಾರ ಪದ್ಧತಿ, ಹವಾಮಾನ, ಜೀವನ ಶೈಲಿ ಇರುತ್ತವೆ. ಇವುಗಳ ಆಧಾರದ ಮೇಲೆ ಅಲ್ಲಿಗೇ ವಿಶಿಷ್ಟವಾದ ಸಂಸ್ಕೃತಿ ಮೂಡಿರುತ್ತದೆ. ಈ ಸಂಸ್ಕೃತಿಯ ಅಂಗವಾಗಿ ಧಾರ್ಮಿಕ ಪರಿಕಲ್ಪನೆಯೂ ಮೂಡಿರುತ್ತದೆ. ಅಂದರೆ ಒಂದು ದೇಶದ ಸಮಗ್ರ ಸಂಸ್ಕೃತಿಯ ಅವಿಭಾಜ್ಯ ಅಭಿನ್ನ ಉತ್ಪನ್ನವೇ ಧರ್ಮ. ಆದುದರಿಂದಲೇ ಅದು ತಾನು ಜನಿಸಿದ ದೇಶದ ಸೀಮೆಯ ಆಚಾರ ಭಾಗ ಮಾತ್ರವಾಗಿರಬೇಕಾಗುತ್ತದೆ, ಭಾಷೆಯ ಸ್ವರೂಪದಂತೆ. ಅದು ಬೇರೊಂದು ಸೀಮೆಯ ಸಂಸ್ಕೃತಿಯ ಮೇಲೆ ಆಕ್ರಮಣ ಮಾಡ ಹೊರಡುವುದು ಅಕ್ಷಮ್ಯವೂ, ಅತಿ ಕ್ರೂರವೂ ಆಗಿ, ಅದು ಮತ್ತೊಂದು ಸಂಸ್ಕೃತಿಯನ್ನು ಗುಲಾಮನನ್ನಾಗಿಸಿಕೊಳ್ಳಲು ಹೊರಟ ದುಷ್ಕೃತ್ಯ ಮಾದರಿಯಾದುದಾಗುತ್ತದೆ.

ಆದರೆ ಇಂದು ಧರ್ಮ ಸೀಮೆಯನ್ನು ದಾಟುವ ಕೆಲಸವನ್ನು ಜಾಗತಿಕ ಮಟ್ಟದಲ್ಲಿ ನಡೆಸುತ್ತಿದೆ. ಈ ಕಾರಣದಿಂದಾಗಿಯೇ ಧರ್ಮಕ್ಕೆ ಸೀಮೆಯ ಹಂಗಿಲ್ಲ. ಅದನ್ನು ದಾಟಿ ಧಾರ್ಮಿಕ ಸಾಮ್ರಾಜ್ಯವನ್ನು ಸ್ಥಾಪಿಸುವುದೇ ಮುಖ್ಯವೆಂದು ಪ್ರಬಲ ಜನಸಂಖ್ಯೆಯ ಬಾಹುಳ್ಯವಿರುವ ಧರ್ಮಗಳು ಹೇಳುತ್ತಿವೆ. ಈ ನಿಟ್ಟಿನಲ್ಲಿ ಜಗತ್ತಿನಲ್ಲಿ ಧರ್ಮಯುದ್ಧಗಳು ನಡೆದಿವೆ, ನಡೆಯುತ್ತಿವೆ. ಈ ಧರ್ಮಮೂಲ ಸಿದ್ಧಾಂತವು ವ್ಯಕ್ತಿಯನ್ನು ದೇಶಮೂಲವಾದಿತನದಿಂದ ಧರ್ಮಮೂಲಭೂತವಾದಿಯನ್ನಾಗಿ ಪರಿವರ್ತಿಸುತ್ತದೆ. ಅವನಿಗೆ ದೇಶಕ್ಕಿಂತ ಧರ್ಮವೇ ಪ್ರಧಾನವಾಗಿ, ದೇಶದ್ರೋಹದಂಥ ಕೆಲಸ ಮಾಡಲು ಹೇಸಿಗೆ ಅನ್ನಿಸುವುದಿಲ್ಲ. ಧಾರ್ಮಿಕ ಮೂಲಭೂತವಾದಿಗಳಿಗೆ ತನ್ನ ಸೀಮೆ, ಅದರ ಭಾಷೆ ಮತ್ತು ಅಲ್ಲಿನ ಬದುಕು ಮುಖ್ಯವಾಗುವುದೇ ಇಲ್ಲ. ಮಾನವೀಯ ಮೌಲ್ಯಗಳಿಗಿಂತ ನಂಬಿಕೆಯ ಆಧಾರದ ಮೇಲೆ ಮೂಡಿದ ಧಾರ್ಮಿಕ ಆಚರಣೆಗಳು ಮುಖ್ಯವಾಗುತ್ತವೆ. ತನ್ನ ಧರ್ಮವೇ ಶ್ರೇಷ್ಠವೆಂಬ ಅಹಂಕಾರದಿಂದ ಜಗತ್ತನ್ನು ಅದರ ಬಹುರೂಪಕತೆಯಿಂದ ಧಾರ್ಮಿಕ ಏಕರೂಪಕತೆಗೆ ಪರಿವರ್ತಿಸುವ ಕೆಲಸವನ್ನು ಮೂಲಭೂತವಾದ ಯತ್ನಿಸುತ್ತದೆ. ಅದಕ್ಕಾಗಿ ಅಮಾನವೀಯ ಕೃತ್ಯಗಳನ್ನು ಎಸಗಿ, ಅದಕ್ಕೆ ಧರ್ಮದ ಮುಖವಾಡ ಧರಿಸಿ ನಗುತ್ತದೆ. ಅದಕ್ಕೆ ಧರ್ಮವನ್ನು ರಕ್ಷಿಸಿದವನಿಗೆ ಧರ್ಮ ರಕ್ಷಣೆ ನೀಡುತ್ತದೆ ಎಂಬ ಹುಸಿ ಸಿದ್ಧಾಂತ ಲೇಪನ ಹಚ್ಚುತ್ತದೆ.

ಪ್ರತಿಯೊಬ್ಬನಿಗೂ ಆತ ಹುಟ್ಟಿದ ನೆಲ ಧರ್ಮಕ್ಕಿಂತಲೂ ಶ್ರೇಷ್ಠವಾದುದೆಂಬ ಅರಿವು ಮೂಡಬೇಕು. ಧರ್ಮವೆಂಬುದು ಆ ನೆಲದ ಸಂಸ್ಕೃತಿಯ ಒಂದಂಶವೇ ಹೊರತು, ಅದೇ ಎಲ್ಲವೂ ಅಲ್ಲವೆಂಬ ತಿಳಿವಳಿಕೆ ಬರಬೇಕು. ಆಗ ಮಾತ್ರ ದೇಶದ ಸಮಗ್ರತೆ ಸೋದರತ್ವದ ಮೂಲಕ ಅರಳಲು ಸಾಧ್ಯ.

■ **ಶಿಕಾಕು**

## ಮಾತೇ ಮುತ್ತು

★ ಬದಲಾವಣೆ ಅನಿವಾರ್ಯ; ಬದಲಾವಣೆ ನಿರಂತರ.
—ಬೆಂಜಮಿನ್ ಡಿಸ್ರೇಲಿ

★ ವಸ್ತುಸ್ಥಿತಿ ನಿಮ್ಮ ತತ್ವಕ್ಕೆ ಹೊಂದಾಣಿಕೆ ಆಗದಿದ್ದರೆ, ವಸ್ತುಸ್ಥಿತಿಯನ್ನೇ ಬದಲಿಸಿ.
—ಆಲ್ಬರ್ಟ್ ಐನ್‌ಸ್ಟೀನ್

★ ಪ್ರಕೃತಿಯ ಬಹುದೊಡ್ಡ ತತ್ವ ಏನೆಂದರೆ ಇಲ್ಲಿ ನೀವೊಬ್ಬರೇ ಇರುವುದಲ್ಲ.
—ಭಗವಾನ್ ಮಹಾವೀರ

★ ಮದುಮಗಳು ಪ್ರಿಯತಮನ ಜತೆಗಿದ್ದರೆ ಮದುವೆ ಔತಣಕ್ಕೆ ಯಾರು ಕಾಯುತ್ತಾರೆ?
—ಸಂತ ಕಬೀರ

★ ನಾಗರಿಕತೆ ಎಂದರೆ ಅದೊಂದು ಚಳವಳಿ; ಪರಿಸ್ಥಿತಿ ಅಲ್ಲ. ಅದೊಂದು ಪಯಣ; ನಿಲ್ದಾಣವಲ್ಲ.
—ಅರ್ನಾಲ್ಡ್ ಟಾಯ್ನ್‌ಬೀ

★ ಎರಡು ಮೊಲಗಳನ್ನು ಓಡಿಸಿಕೊಂಡು ಹೋಗುವವನಿಗೆ ಒಂದೂ ಸಿಗುವುದಿಲ್ಲ.
—ಜಪಾನಿ ಗಾದೆ

★ ಚಾರಿತ್ರ್ಯ ಒಮ್ಮಿಂದೊಮ್ಮೆಲೆ ರೂಪುಗೊಳ್ಳುವುದಿಲ್ಲ. ಬದುಕಿನ ಅನುಭವ, ಉಣ್ಣುವ ನೋವು, ನಿಖರ ದೃಷ್ಟಿಕೋನ, ಸ್ಫೂರ್ತಿಯುತ ಹೆಬ್ಬಯಕೆ ಮತ್ತು ಗಳಿಸುವ ಯಶಸ್ಸು ಎಲ್ಲವೂ ಸೇರಿ ರೂಪುಗೊಳ್ಳುತ್ತದೆ.
—ಹೆಲೆನ್ ಕೆಲ್ಲರ್

★ ಹೆಬ್ಬಯಕೆ ಇಲ್ಲದ ಮನುಷ್ಯ ರೆಕ್ಕೆಗಳಿಲ್ಲದ ಹಕ್ಕಿಯಂತೆ.
—ವಾಲ್ಟರ್ ಕಟಿಂಗ್ಹಾಮ್

★ ವೈಫಲ್ಯದ ಕೊನೆಯ ತಾಣವೇ ಹೆಬ್ಬಯಕೆ.
—ಆಸ್ಕರ್ ವೈಲ್ಡ್

★ ನಾಗರಿಕತೆ ಯಾವತ್ತೂ ನೈತಿಕತೆಯ ಮೇಲೆ ನಿಂತಿದೆ.
—ರಾಲ್ಫ್ ಎಮರ್ಸನ್

★ ನಾಗರಿಕತೆಯು ಶಿಸ್ತಿನೊಂದಿಗೆ ಹುಟ್ಟುತ್ತದೆ, ಸ್ವಾತಂತ್ರ್ಯದೊಂದಿಗೆ ಬೆಳೆಯುತ್ತದೆ, ಕಲಹದಲ್ಲಿ ಸಾಯುತ್ತದೆ.
—ವಿಲ್ ಡ್ಯುರಾಂಟ್

★ ಹೆಬ್ಬಯಕೆಗೆ ಕೊನೆಯಿಲ್ಲ.
—ಯೆಶಿದಾ ಕೊಂಕೊ

★ ಕೊಳಕು ಬಾಯಿಯಿಂದ ಸಭ್ಯ ಭಾಷೆ ಹೊರಬರುವುದಿಲ್ಲ.
—ಚೀನೀ ಗಾದೆ

★ ಬಡವನಿಗೆ ಸಹನೀಯ ಬದುಕು ಒದಗಿಸುವುದೇ ನಾಗರಿಕತೆಯ ನಿಜ ಪರೀಕ್ಷೆ.
-ಸ್ಯಾಮುವೆಲ್ ಜಾನ್ಸನ್